ಶ್ರೀ ಹೆಚ್. ಡಿ. ದೇವೇಗೌಡ(ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು) ೧೯೫೬ನೇ ಇಸವಿಯ ಕಂಪನಿಗಳ ಶಾಸನದ ೬೧೯ (೨)(ಎ)ನೇ ಕಲಮಿನ ಮೇರೆಗೆ ೧೯೮೧-೮೨ನೇ ಸಾಲಿನ ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ನಿಯಮಿತದ ಹದಿನಾಲ್ಕನೆಯ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಶ್ರೀ ವಿ. ಎಲ್. ಪಾಟೀಲ್.(ಸಮಾಜ ಕಲ್ಯಾಣ ಮಂತ್ರಿ)—೧೯೫೬ನೇ ಇಸವಿಯ ಕಂಪನಿಗಳ ಕಾಯಿದೆಯ ೬೧೯(೨)(ಎ)ಕಲಮಿನ ಮೇರೆಗೆ ೧೯೮೪-೮೫ನೇ ಸಾಲಿನ ಕರ್ನಾಟಕ ಹಿಂದುಳಿದ ವರ್ಗಗಳ ಹಾಗೂ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತದ ಏಳನೆಯ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಕಾರ್ಯದರ್ಶಿ.—ಕರ್ನಾಟಕ ವಿಧಾನ ಪರಿಷತ್ತು ಹಿಂದಿರುಗಿಸಿದ ೧೯೮೫ನೆ, ಇಸವಿಯ ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆ ಮೇಲಿನ ತೆರಿಗೆ)(ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದಿಡುತ್ತೇನೆ,

ಅಧ್ಯಕ್ಷರು.—ಮೇಲ್ಕಂಡ ಎಲ್ಲಾ ಕಾಗದ ಪತ್ರಗಳನ್ನು ಸಭೆಯಲ್ಲಿ ಮುಂಡಿಸಲಾಗಿದೆ.

ಗಮನ ಸೆಳೆಯುವ ಸೂಚನೆಗಳು

ಮುದೋಳ್ ತಾಲ್ಲೂಕು ಬಸವಾಪಟ್ಟಣದ ಹತ್ತಿರ ಕಟ್ಟಿಸಿರುವ ನೀರಾವರಿ ಟ್ಯಾಂಕ್‌ನ ಬಗ್ಗೆ.

ಶ್ರೀ ಬಿ. ಜೆ. ಜಮಖಂಡಿ (ಮುದೋಳ್).—ಮಾನ್ಯ ಅಧ್ಯಕ್ಷರೇ, ಮುದೋಳ್ ತಾಲ್ಲೂಕಿನ ಬಸವಾಪಟ್ಟಣದ ಹತ್ತಿರ೧೯೫೫ನೇ ಇಸವಿಯಲ್ಲಿ ೬ ಲಕ್ಷ ರೂಪಾಯಿ ವೆಚ್ಚ ಮಾಡಿ, ಸರ್ಕಾರ ನೀರಾವರಿ ಸೌಲಭ್ಯವಾಗಿ ಒಂದು ಟ್ಯಾಂಕನ್ನು ಕಟ್ಟಿದೆ. ಇದರಿಂದ ಎಷ್ಟರ ಮಟ್ಟಿಗೆ ನೀರಾವರಿ ಸೌಲಭ್ಯವಾಗಿದೆ ಎಂಬುದನ್ನು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್ ಡಿ. ದೇವೇಗೌಡ (ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು)—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೇಳಿರತಕ್ಕ ವಿಚಾರದಲ್ಲಿ ನನ್ನ ಹೇಳಿಕೆ ಈ ಕೆಳಕಂಡಂತೆ ಇದೆ.

ಬಸವಪಟ್ಟಣದ ಹತ್ತಿರ ದಾದಾಪೀರ್ ಎಂಬಲ್ಲಿ ಒಂದು ಸಣ್ಣ ನೀರಾವರಿ ಕೆರೆಯನ್ನು ಕಟ್ಟಲು ೪.೩೫,೩೮೦ ರೂಗಳ ಅಂದಾಜಿಗೆ ಸರ್ಕಾರದ ಆಡಳಿತಾತ್ಮಕ ಒಪ್ಪಿಗೆಯನ್ನು ದಿನಾಂಕ ೩೦-೫-೧೯೬೨ರಲ್ಲಿ ಕೊಡಲಾಗಿತ್ತು. ಈ ಅಂದಾಜಿಗೆ ತಾಂತ್ರಿಕ ಮಂಜೂರಾತಿಯನ್ನು ಮುಖ್ಯ ಇಂಜಿನಿಯರ್ (ಜನರಲ್) ಅವರು ದಿನಾಂಕ ೨೭-೬-೧೯೬೨ರಲ್ಲಿ ಕೊಟ್ಟಿದ್ದರು. ಮಂಜೂರಾದ ಅಂದಾಜಿನ ಪ್ರಕಾರ, ಕೆರೆಯ ಆಚ್ಚು ಕಟ್ಟು ೩೬೯.೩೬ ಹೆಕ್ಟೇರುಗಳು, ಕೆರೆಯ ಜಲಾಶಯದ ಪ್ರದೇಶದ ವಿಸ್ತೀರ್ಣ ೨೪೪.೩೫ ಚ. ಕಿ. ಮೀ ಕೆರೆಯ ಕೆಲಸ ೫೦೪ ಲಕ್ಷ ರೂ.ಗಳ ವೆಚ್ಚದಲ್ಲಿ ೧೯೬೪ರಲ್ಲಿ ಪೂರ್ಣಗೊಂಡಿತು. ಆದರೆ, ಕೆರೆಯು ಮಳೆಯ ಅಭಾವ ಪ್ರದೇಶದಲ್ಲಿ (ರೈನ್ ಷಾಡೋ ಏರಿಯ) ಬರುವುದರಿಂದ ಪ್ರತಿ ವರ್ಷ ತುಂಬುತ್ತಿಲ್ಲ. ಆದುದರಿಂದ ಕೆರೆಯ ಪಾಪ್ತಿಗೆ ಒಳಪಟ್ಟಿರುವ ಆಚ್ಚುಕಟ್ಟನ್ನು ಪೂರ್ತಿಯಾಗಿ ಅಭಿವೃದ್ಧಿಗೊಳಿಸಲು ಸಾಧ್ಯವಾಗುತ್ತಿಲ್ಲ.

೧೯೭೪–೭೫ರಿಂದ ಈ ಕೆರೆಯಿಂದ ನೀರಾವರಿಗೆ ಒಳಪಟ್ಟ ಆಚ್ಚುಕಟ್ಟಿನ ವಿವರ ಈ ಕೆಳಕಂಡಂತಿದೆ.

ವರ್ಷ	ಖಾರೀಫ್ (ಹೆಕ್ಟೇರು)	ರಬಿ (ಹೆಕ್ಟೇರು)	ಒಟ್ಟು (ಹೆಕ್ಟೇರು)	ಪರಾ
೧೯೭೪–೭೫	೧೪೧.೮೭	೧೪೧.೮೭	೩೬೩.೭೪	—
೧೯೭೫–೭೬	—	೪೨.೪೪	೪೨.೪೪	ವಂಳೆ ಆಗದೆ ಕೆರೆಗೆ ಸಾಕಷ್ಟು ನೀರು ಬಂದಿಲ್ಲ.
೧೯೭೬–೭೭	—	—	—	—,,—
೧೯೭೭–೭೮	೧೫೫.೯೧	೯೮.೬೩	೧೧೪.೫೪	—,.—
೧೯೭೮–೭೯	೬.೩೦	೨೧.೫೭	೨೬.೮೭	—.,—
೧೯೭೯–೮೦	೯೮.೫೦	೯೧.೪೧	೧೮೮.೯೧	—,.—
೧೯೮೦–೮೧	—	—	—	—,,—
೧೯೮೧–೮೨	೩೬.೮೯	—	೩೬.೮೯	—,,—
೧೯೮೨–೮೩	—	—	—	—,.—
೧೯೮೩–೮೪	—	—	—	—.,—
೧೯೮೪–೮೫	—	—	—	...,.—

೧೦–೦೦ ಎ. ಎಂ.

ಶ್ರೀ ಬಿ. ಜಿ. ಜವಳಿ –ಮಾನ್ಯ ಅಧ್ಯಕ್ಷರೇ. ಲಿಖಿತ ಮೂಲಕ ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದನ್ನು ನಾನು ಕೇಳಿದೆ ಆದರೆ ಈ ಬಗ್ಗೆ ಹೇಳಬೇಕೆಂದರೆ ಅಲ್ಲಿ ಇರತಕ್ಕಂತ ನೀರು ಒಂದು ಎಕರೆಗೂ ಸಾಕಾಗುವುದಿಲ್ಲವೆಂದು ನನ್ನ ಕ್ಷೇತ್ರದ ಜನ ಬಂದು ನನಗೆ ಹೇಳುತ್ತಿದ್ದಾರೆ. ಆದುದರಿಂದ ಮಾನ್ಯ ಮಂತ್ರಿಗಳು ಇದನ್ನು ಮತ್ತೊಮ್ಮೆ ಪುನರ್ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ,—ನಾವು ಅವರಿಗೆ ಯಾವ ವರ್ಷ ನೀರು ಕೊಟ್ಟಿದ್ದೇವೆ. ಯಾವ ವರ್ಷ ನೀರು ಕೊಡಲಿಕ್ಕೆ ಆಗಲಿಲ್ಲ ಅದೆಲ್ಲವನ್ನೂ ಈಗಾಗಲೇ ಹೇಳಿದ್ದೇನೆ ತಮಗೆ ಹೇಳಬೇಕಾದರೆ ಆ ಕೆರೆಯಲ್ಲಿ ೧೯೬೪ರಿಂದ ೧೯೭೩ರವರೆಗೂ ನೀರು ತುಂಬಿರಲಿಲ್ಲವಾದ್ದರಿಂದ ಅವರಿಗೆ ನೀರು ಕೊಡಲಿಕ್ಕೆ ಆಗಲಿಲ್ಲ. ೧೯೭೪ರಿಂದ ಆ ಕೆರೆಗೆ ಬಂದಿರತಕ್ಕಂಥಾ ನೀರಿನ ಪ್ರಮಾಣಕ್ಕನುಗುಣವಾಗಿ, ಅವರಿಗೆ ಎಷ್ಟು ನೀರು ಕೊಡುವುದಕ್ಕೆ ಸಾಧ್ಯವೋ ಅಷ್ಟು ನೀರನ್ನು ಕೊಟ್ಟಿದ್ದೇವೆ. ಆ ಕೆರೆಯಲ್ಲಿ ನೀರು ಕೊಡುವಾಗ ನೀರಿನ ಪ್ರಮಾಣ ಎಷ್ಟು ಇದೆ, ನೀರು ಎಷ್ಟು ಕೊಡಬಹುದು ಎನ್ನುವುದರ ಬಗ್ಗೆ ಅಸೆಸ್‌ಮೆಂಟ್ ಏನು ಮಾಡಿದರು ಅದರಲ್ಲಿ ದೋಷ ಇದೆ ಎನ್ನುವುದು ಮೆಲ್ನೋಟಕ್ಕೆ ಅರ್ಥವಾಗಿದೆ ಆ ಭಾಗದ ರೈತರೂ ಸಹ ಹೇಳಿದ್ದಾರೆ. ಮತ್ತು ಪಕ್ಕದಲ್ಲಿರತಕ್ಕಂಥಾ ಹಳ್ಳದಲ್ಲಾಗಲೀ ಕ್ಯಾಚ್‌ಮೆಂಟ್ ಏರಿಯಾದಲ್ಲಿ ಆಗಲಿ ನೀರು ಇದ್ದರೆ ಅದನ್ನು ಡಿಸ್‌ಕ್ಯೂಸ್ ಮಾಡಿ ಅಲ್ಲಿಂದ ನೀರು ತರುವುದಕ್ಕೆ ಸಾಧ್ಯವಿಲ್ಲ. ಇದರಿಂದ ಆ ಕೆರೆಯಿಂದಲೂ ಆ ಭಾಗದ ಜನರಿಗೆ ಉಪಯೋಗವಾಗುವುದಿಲ್ಲ. ಆದುದರಿಂದ ನಾನು ಅವರಿಗೆ ಸಲಹೆ ಮಾಡುವುದೇನೆಂದರೆ ಅಲ್ಲಿ ಯಾವುದಾದರೂ ವ್ಯಾಲಿ ಇದ್ದರೆ ಅಲ್ಲಿಂದ ನೀರು ಹರಿದು ಹೋಗುತ್ತಿದ್ದರೆ ಅದನ್ನು ಈ ಕಡೆಗೆ ಡೈವರ್ಟ್ ಮಾಡುವುದಕ್ಕೆ ಸಾಧ್ಯ ಇದೆ ಎಂದು ಅವರು ನಮಗೆ ಸೂಚನೆ ಕೊಡುವುದಾದರೆ ನಾನು ಪರಿಶೀಲನೆ ಮಾಡುತ್ತೇನೆ. ಅಲ್ಲದೆ ಇನ್ನೂ ಒಂದು ವಿಷಯ ಅವರಿಗೆ ಹೇಳಬೇಕಾದರೆ ಆ ಭಾಗದ ಜನರಿಗೆ ಈ ಟ್ಯಾಂಕ್ ಅನ್ನು ಉಪಯೋಗ ಮಾಡಿಕೊಳ್ಳುವುದಕ್ಕಾಗಿ ಇದಕ್ಕೆ ಆಧ್ಯತೆ ಕೊಟ್ಟು ೫ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಆದುದರಿಂದ ಮಾನ್ಯ ಸದಸ್ಯರು ಇದರ ಬಗ್ಗೆ ಇನ್ನೇನಾದರೂ ಸಲಹೆ ಕೊಡುವುದಾದರೆ ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಬಿ. ಜಿ. ಜವಳಿ.—ಮಾನ್ಯ ಮಂತ್ರಿಗಳವರ ಗಮನಕ್ಕೆ ಒಂದು ವಿಷಯವನ್ನು ತರುತ್ತೇನೆ ಈಗ ಘಟಪ್ರಭಾ ಎಡದಂಡೆ ಕಾಲುವೆಯಿಂದ ೩೦–೪೦ ಪರ್ಸೆಂಟ್ ನೀರು ಹರಿದು ಬರುತ್ತಿರುವುದರಿಂದ ಆ ಭಾಗದ ಜನರು ಬೇಸಾಯ ಮಾಡುತ್ತಿದ್ದಾರೆ: ಆದುದರಿಂದ ಈ ಭಾಗದ ಜನರಿಗೆ ಬಲದಂಡೆ ಕಾಲುವೆಯಂ ಯೋಜನೆಯನ್ನು ತೆಗೆದುಕೊಂಡು ಕೆಲಸ ಮಾಡುವುದಾದರೆ ಅವರಿಗೆ ಬೇಸಾಯ ಮಾಡುವುದಕ್ಕೆ ಅನುಕೂಲವಾಗುತ್ತದೆ, ಆ ರೀತಿ ಮಾಡುವುದಕ್ಕೆ ಪರಿಶೀಲನೆ ಮಾಡುತ್ತೀರಾ ?

ಶ್ರೀ ಹೆಚ್. ಡಿ. ದೇವೇಗೌಡ.—ಅದನ್ನು ಸಹ ಪರಿಶೀಲನೆ ಮಾಡೋಣ. ಈ ಘಟಪ್ರಭಾ ಮತ್ತು ಮಲಪ್ರಭಾದಿಂದ ಒಂದು ಇಂಚು ನೀರನ್ನೂ ಕೂಡ ಹೆಚ್ಚಿಗೆ ಅಲ್ಲಿಂದ ಕೊಡುವುದಕ್ಕೆ ಸಾಧ್ಯವಿಲ್ಲ ಎತಕ್ಕೆಂದರೆ ಆ ನೀರನ್ನೂ ಪವರ್‌ಗಾಗಿ ಉಪಯೋಗಿಸಿಕೊಳ್ಳಬೇಕಾಗುತ್ತವೆ. ತಮಗೆ ಹೇಳಬೇಕಾದರೆ ಈ ಬಗ್ಗೆ ನಾನು ಮತ್ತು ಶ್ರೀ ಜೆ. ಹೆಚ್ ಪಟೇಲರು ಜಗಳವಾಡಿ ಈ ರೀತಿಯಾಗಿ ತೀರ್ಮಾನ ಮಾಡಿದ್ದೇವೆ. ಈಗ ತಾವು ಇದರಿಂದಲಾದರೂ ನೀರು ಕೊಡಿ ಎನ್ನುವ ಬೇಡಿಕೆಯನ್ನು ಇಟ್ಟಿದ್ದೀರಿ. ಮುಂದೆ ಇದರ ಬಗ್ಗೆ ಒಂದು ಅಂತಿಮ ನಿರ್ಣಯ ತೆಗೆದುಕೊಂಡ ಮೇಲೆ ಸಾಧ್ಯವಾದರೆ ಅದರಲ್ಲಿ ದೊರಕುವುದಾದರೆ ನಿಮ್ಮ ಭಾಗಕ್ಕೆ ಹೆಚ್ಚು ನೀರನ್ನು ಕೊಡಬೇಕೆನ್ನುವ ಆಶಯ ಇಟ್ಟುಕೊಳ್ಳುತ್ತೇನೆ.

ಕೊಳ್ಳೆಗಾಲ ತಾಲ್ಲೂಕಿನ ಅನೇಕ ರೈತರಿಗೆ ಪಟ್ಟಾ ನೀಡದಿರುವ ಬಗ್ಗೆ

ಶ್ರೀ ರಾಜೂಗೌಡ. (ಹಾನಗಲ್) —ಕೊಳ್ಳೆಗಾಲ ತಾಲ್ಲೂಕಿನಲ್ಲಿ ಅನೇಕ ರೈತರುಗಳು ಹತ್ತಾರು ವರ್ಷಗಳಿಂದಲೂ ಪಟ್ಟಾ ಪಡೆಯಲು ತೊಂದರೆಯಾಗಿರುವುದರಿಂದಅವರಿಗೆ ಬಾವಿ ಮುಂತಾದ ಕೆಲಸ ಕಾರ್ಯಗಳನ್ನು ಮಾಡಲು ಇದರಿಂದ ತೊಂದರೆಯಾಗಿರುವುದರಿಂದ ಆ ಬಗ್ಗೆ ತಾವು ಏನು ಕಾರ್ಯಕ್ರಮಗಳನ್ನು ಕೈಗೊಂಡಿದ್ದೀರಿ ಅನ್ನುವುದರ ಸಲುವಾಗಿ ಮಾನ್ಯ ಮಂತ್ರಿಗಳ ಗಮನವನ್ನು ಸೆಳೆಯ ಬಯಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ, (ಕಂದಾಯ ಮಂತ್ರಿಗಳು)—ಅಧ್ಯಕ್ಷರೇ, ನನಗೆ ಇದುವರೆಗೆ ಆ ಬಗ್ಗೆ ಇನ್ನೂ ಮಾಹಿತಿ ಬಂದಿಲ್ಲ. ಈ ವಿಚಾರವಾಗಿ ಈಗಾಗಲೇ ಟೆಲೆಕ್ಸ್‌ಮೆಸೆಜ್ ಅನ್ನು ಸಹ ಕಳುಹಿಸಿಕೊಟ್ಟಿದ್ದೇನೆ. ಒನೇ ತಾರೀಖಿನವರೆಗೆ ಟೈಂ ಕೊಡಿ ವಿವರವನ್ನು ತರಿಸಿಕೊಡುತ್ತೇನೆ.

ಕೃತಕ ರೇಷ್ಮೆಯ ದರವನ್ನು ಹೆಚ್ಚಿಸಿರುವ ಬಗ್ಗೆ.

ಶ್ರೀ ಕಡಪಟ್ಟಿ ಶಿವಸಂಗಪ್ಪ —ಮಾನ್ಯ ಅಧ್ಯಕ್ಷರೇ, ಕೃತಕ ರೇಷ್ಮೆಯ ದರವನ್ನು ಪಾರ್ಲಿಮೆಂಟ್ ಚುನಾವಣೆ ಆದನಂತರ ೮ ರೂಪಾಯಿನಿಂದ ೧೧೦ ರೂಪಾಯಿಗೆ ಹೆಚ್ಚಿಸಿರುವುದರಿಂದ ಬಡ ನೇಕಾರರ ಬಹಳ ತೊಂದರೆಯಾಗಿದೆ. ಅಲ್ಲದೆ ಇದರಿಂದ ಅವರಿಗೆ ೧೦-೧೫ ರೂಪಾಯಿ ಲುಕ್ಸಾನು ಬರುತ್ತದೆ. ಮಾರ್ಚ್‌ನಲ್ಲಿ ನಡೆದಂಥಾ ವಿಧಾನಸಭಾ ಚುನಾವಣೆ ಸಮಯದಲ್ಲಿ ಮಾನ್ಯ ಮುಖ್ಯಮಂತ್ರಿಗಳಿಗೂ ಮತ್ತು ಮಾನ್ಯ ಹಣಕಾಸಿನ ಮಂತ್ರಿಗಳಿಗೂ ಈ ದರವನ್ನು ಕಡಿಮೆ ಮಾಡಿಕೊಟ್ಟು ಆ ಬಡ ನೇಕಾರರಿಗೆ ಅನುಕೂಲ ಮಾಡಿಕೊಡಬೇಕು ಎಂದು ತಿಳಿಸಲಾಗಿತ್ತು. ಆದರೂ ಸಹ ಇದರ ಬಗ್ಗೆ ಏನೂ ಕಾರ್ಯಕ್ರಮ ಕೈಗೊಂಡಿಲ್ಲ. ಅವರು ಇವತ್ತಿನ ದಿವಸ ಒಪ್ಪತ್ತು ಊಟಕ್ಕೂ ಕಷ್ಟವಾಗಿ ಬಹಳ ತೊಂದರೆಯಲ್ಲಿದ್ದಾರೆ ಆದುದರಿಂದ ಅವರ ಬಗ್ಗೆ ಏನು ಕಾರ್ಯಕ್ರಮ ಕೈಗೊಂಡಿದ್ದೀರಿ ಏನ್ನುವುದರ ಬಗ್ಗೆ ಮಾನ್ಯ ಮಂತ್ರಿಗಳ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ. (ಸಣ್ಣಪ್ರಮಾಣದ ಕೈಗಾರಿಕಾ ರಾಜ್ಯ ಮಂತ್ರಿಗಳು) ನಾನು ಈ ಬಗ್ಗೆ ಒಂದು ಹೇಳಿಕೆಯನ್ನು ನೀಡುತ್ತೇನೆ. ಅದು ಈ ರೀತಿ ಇದೆ.

ಮಾನ್ಯ ಸದಸ್ಯರು ತಮ್ಮ ಸೂಚನೆಯಲ್ಲಿ ಕೃತಕ ರೇಷ್ಮೆಯ ದರ ಲೋಕಸಭೆಯ ಚುನಾವಣೆಯ ನಂತರ ಶೇಕಡಾ ೨೦ ರಿಂದ ೩೦ ರವರೆಗೆ ಏರಿದೆಯೆಂದು ಮತ್ತು ಆದರಿಂದಾಗಿ ಬಿಜಾಪುರ ಜಿಲ್ಲೆಯ ನೇಕಾರರಿಗೆ ಪ್ರತಿ ಸೀರೆಯ ಮೇಲೆ ರೂ. ೮ ರಿಂದ ೧೦ ರವರೆಗೆ ನಷ್ಟ ಹೊಂದ ಬೇಕಾಗಿದೆ ಎಂದು ಪ್ರಸ್ತಾಪಿಸಿದ್ದಾರೆ.

ಈ ಸಂಬಂಧದಲ್ಲಿ ಸದನದ ಗಮನಕ್ಕೆ ತರುವುದೇನೆಂದರೆ, ನೇಕಾರರಿಗೆ ಕೃತಕ ರೇಷ್ಮೆಯನ್ನು ಸರಬರಾಜು ಮಾಡುವ ವಿಷಯದಲ್ಲಿ ರಾಜ್ಯ ಸರಕಾರದ ನೇರ ಪಾತ್ರವಿರುವುದಿಲ್ಲ ಹಾಗೂ ಕೃತಕ ರೇಷ್ಮೆಯ ಬೆಲೆ ಏರಿಕೆಯಲ್ಲಿ ರಾಜ್ಯ ಸರಕಾರದ ಪೊಣೆ ಏನೂ ಇರುವುದಿಲ್ಲ. ಕೃತಕ ರೇಷ್ಮೆಯ ನೇಯ್ಗೆಯಲ್ಲಿ ತೊಡಗಿದ ನೇಕಾರರು ತಮಗೆ ಬೇಕಾದ ನೂಲನ್ನು ನೇರವಾಗಿ ಗುಜೇದ ಗುಡ್ಡ, ಬನಹಟ್ಟಿ, ಇಳಕಲ್, ಬೆಳಗಾವಿ ಮುಂತಾದ ಸ್ಥಳಗಳಲ್ಲಿಯ ವ್ಯಾಪಾರಸ್ಥರಿಂದ ಖರೀದಿಸುತ್ತಾರೆ. ಈ ವ್ಯಾಪಾರಸ್ಥರು ಕೃತಕ ರೇಷ್ಮೆಯನ್ನು ನೆರೆ ರಾಜ್ಯಗಳ ಗಿರಣಿಗಳಿಂದ ಕೊಂಡು ಕೊಳ್ಳುತ್ತಾರೆ.